**<u>ದಿನಾಂಕ 21.01.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>**

1. ದಿನಾಂಕ 10/01/2022 ರಂದು ಘಟನೆಯಾಗುವ ಮೊದಲು ಆರೋಪಿಯು ಮನೆಯ ಮುಂದಿನ ರಸ್ತೆಯಲ್ಲಿ ಓಡಾಡುವುದನ್ನು ನಾನು ನೋಡಿದ್ದೇನೆ. ಆರೋಪಿಯ ಮನೆ ಎಲ್ಲಿ ಇತ್ತು ಎಂದು ನನಗೆ ಗೊತ್ತಿಲ್ಲ. ಮೊದಲು ಆರೋಪಿಯು ಮನೆಯ ಮುಂದಿನ ರಸ್ತೆಯಲ್ಲಿ ಓಡಾಡುತ್ತಿದ್ದನು ಎಂದು ನಾನು ಪೊಲೀಸರಿಗೆ ಹೇಳಿಲ್ಲ. ಮನೆಯ ಸುತ್ತಲು ಇರುವ ಕಾಂಪೌಂಡ್ ಸುಮಾರು 5 ರಿಂದ 5½ ಅಡಿ ಇರಬಹುದು. ಕಾಂಪೌಂಡ್ ಒಳಗಡೆ ಬರಲು ಒಂದು ಗೇಟು ಇದೆ. ಕಾಂಪೌಂಡ್ ದಾಟಿ ಯಾರೂ ಒಳಗೆ ಬರಲು ಸಾಧ್ಯವಿಲ್ಲ, ಯಾಕೆಂದರೆ ಸುತ್ತಲೂ ಎತ್ತರದ ಗ್ರಿಲ್ ಅಳವಡಿಸಲಾಗಿರುತ್ತದೆ. ಕಾಂಪೌಂಡ್ ಒಳಗೆ ಸಿ.ಸಿ. ಕ್ಯಾಮೆರಾ ಇರಲಿಲ್ಲ.

2. ದಿನಾಂಕ 10/01/2022 ರಂದು ನಮ್ಮ ಮನೆಯಲ್ಲಿ ನಮಗೆ ಸಂಬಂಧಿಸಿದಂತೆ ಮತ್ತು ನಮ್ಮ ಸಂಬಂಧಿಕರಿಗೆ ಸಂಬಂಧಿಸಿದಂತೆ ಯಾವುದೇ ಕಾರ್ಯಕ್ರಮ ಇರಲಿಲ್ಲ. ಸಾಮಾನ್ಯವಾಗಿ ನನ್ನ ಎಲ್ಲ ಒಡವೆಗಳನ್ನು ಕಬೋರ್ಡ ನಲ್ಲಿ ಇಟ್ಟು ಬೀಗ ಹಾಕಿರುತ್ತೇನೆ. ಆದರೆ 11 ನೇ ತಾರೀಖಿನಂದು ನನ್ನ ಒಂದು ಸರ ಮತ್ತು 4 ಬಳೆಗಳನ್ನು ತಲೆದಿಂಬಿನ ಕೆಳಗಡೆ ಇಟ್ಟಿರುತ್ತೇನೆ. 11ನೇ ತಾರೀಖಿನಂದು ಆರೋಪಿ ಕೆಲಸ ಮಾಡುವ ಸಮಯದಲ್ಲಿ ನಾನು ಜೊತೆಗೆ ಇದ್ದೆ. ನಮ್ಮ ಕಟ್ಟಡದಲ್ಲಿ ನೆಲಮಹಡಿ ಮತ್ತು ಮೊದಲ ಮಹಡಿ ಇರುತ್ತದೆ. ನೆಲಮಹಡಿಯ ಮನೆ ಬಾಡಿಗೆ ಕೊಟ್ಟಿದ್ದು, ಅವರು ಖಾಲಿ ಮಾಡಿದ ನಂತರ ಮನೆ ಖಾಲಿ ಇತ್ತು. ಮೊದಲನೇ ಮಹಡಿಗೆ ಹೋಗಲು ಒಂದು ಪ್ರವೇಶ ದ್ವಾರ ಇರುತ್ತದೆ. ಸದರಿ ಪ್ರವೇಶ ದ್ವಾರದ ಬಳಿ ಯಾರು ಬಂದು ಹೋದರು ನನಗೆ ಗೊತ್ತಾಗುತ್ತದೆ ಎಂದರೆ ಸರಿ.

3. ಆರೋಪಿಯು ಮೊದಲನೇ ಮಹಡಿಯ ಮನೆಗೆ ಹೋಗಿದ್ದನು ನಾನು ನೋಡಲಿಲ್ಲ ಮತ್ತು ನನಗೆ ಅದು ಗೊತ್ತಿಲ್ಲ ಎಂದರೆ ಸರಿ. ಆರೋಪಿಗೆ ನೀರು ಕುರಿಯಲು ನಾನು ತೋರಿಸಿದ ನಲ್ಲಿಯು ಕಾಂಪೌಂಡ್ ನ ಒಳಗಡೆ ಪಕ್ಕದಲ್ಲಿ ಇರುತ್ತದೆ. ಆರೋಪಿಯು ನಾನು ತೋರಿಸಿದ ಕಾರ್ಪೋರೇಶನ ಟ್ಯಾಪ್ ನಲ್ಲಿ ನೀರು ಕುಡಿದಿರುತ್ತಾರೆ, ಆದರೆ ಮೊದಲನೇ ಮಹಡಿಗೆ ಹೋಗಿಲ್ಲ

ಮತ್ತು ಅಲ್ಲಿ ಯಾವುದೇ ಕಳ್ಳತನ ಮಾಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಆರೋಪಿಯು ಅರ್ಧ ಗಂಟೆಯ ನಂತರ ಬಂದ, ಆದರೆ ಟೆಂಕ್ಷನ್ ನಲ್ಲಿ ಇದ್ದ, ಸರಿಯಾಗಿ ಕೆಲಸ ಮಾಡುತ್ತಿರಲಿಲ್ಲ ಎಂದು ಹೇಳುತ್ತಾರೆ.

4. ಸದರಿ ಆಭರಣಗಳು ನನ್ನವೇ ಎಂದು ತೋರಿಸಲು ದಾಖಲೆಗಳನ್ನು ಪೊಲೀಸರಿಗೆ ಕೊಟ್ಟಿದ್ದೇನೆ. ಆರೋಪಿಯು ನನ್ನ ಆಭರಣಗಳನ್ನು ಕಳ್ಳತನ ಮಾಡಿಲ್ಲ ಮತ್ತು ದೊರೆತ ಆಭರಣಗಳು ನನ್ನದಲ್ಲ ಎಂದರೆ ಸರಿಯಲ್ಲ. ನಾನು 14ನೇ ತಾರೀಖಿನಂದು ಕೊನೆಯ ಬಾರಿಗೆ ಪೊಲೀಸ್ ಠಾಣೆಗೆ ಹೋಗಿದ್ದೇನೆ. ಒಂದು ತಿಂಗಳ ನಂತರ ಪೊಲೀಸರು ಅಮವಾಸ್ಯೆ ದಿನ ನಾನು ಪೊಲೀಸ್ ಠಾಣೆಗೆ ಹೋದಾಗ ನನ್ನ ಆಭರಣಗಳನ್ನು ತೋರಿಸಿರುತ್ತಾರೆ. ಪೊಲೀಸರು ಸದರಿ ದಿನ ಒಡವೆಗಳನ್ನು ಮಾತ್ರ ತೋರಿಸಿದ್ದಾರೆ ಬೇರೆ ಏನು ಮಾಡಿಲ್ಲ ಎಂದರೆ ಸರಿ. ನನ್ನ ಮನೆಯಲ್ಲಿ ಕಳ್ಳತನ ಆದ ಒಡವೆಗಳಿಗೂ ಮತ್ತು ಆರೋಪಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನಾನು ಬೇರೆ ಎಲ್ಲಿಯೋ ಒಡವೆಗಳನ್ನು ಕಳೆದುಕೊಂಡಿದ್ದು, ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ. ಕೇ. ಸ. ಇ.

(ರಂಗೇಗೌಡ ಸಿ.)
ಮು.ಮ.ದಂ.ನ್ಯಾ.ಬೆಂ.ನಗರ.